# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ - ಅಂತಿಮ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/434/ಗ್ರಾಪಂಕಾ/2014, ಬೆಂಗಳೂರು, ದಿನಾಂಕ: 30-09-2014.
2. ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/556/2014/ARE-9, ದಿನಾಂಕ:28-11-2017.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ ARE-6/ENQ-556/2014/ARE-9, ದಿನಾಂಕ:05-12-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/903/ಗ್ರಾಪಂಕಾ/2017, ದಿನಾಂಕ:30-12-2017.
5. ಶ್ರೀಮತಿ ಅನಿಶಾ ಫಾತಿಮಾ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:09-02-2018.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

"ಶ್ರೀಮತಿ ಅನಿಸಾ ಫಾತಿಮಾ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಸೋಮನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯೆಂದು ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಾಗನಾಯಕನಹಳ್ಳಿ ಮಿಲ್ಕ ಫೆಡರೇಷನ್ ನಾಗನಾಯಕನಹಳ್ಳಿಯ ಆಸ್ತಿ ನಂ.60 ರಲ್ಲಿ ಕಟ್ಟಡ ನಿರ್ಮಾಣದ ಪರವಾನಿಗೆ ಪಡೆಯದೇ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿರುವ ಸಂಗತಿ ಗಮನಕ್ಕೆ ಬಂದ ನಂತರವೂ ಸಹ ಅನಧಿಕೃತ ಕಟ್ಟಡ ನಿರ್ಮಾಣದ ಕೆಲಸ ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವ ಮೂಲಕ ಹಾಗೂ ನಿರ್ಮಿತವಾದ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕ್ರಮ ಕೈಗೊಳ್ಳದೇ ಇರುವ ಮೂಲಕ ಇವರ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966ರ, ನಿಯಮ 3(1)(i) ಮತ್ತು (iii)ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಅಂತ ದೋಷಾರೋಪಣೆಯನ್ನು ಮಾಡಲಾಗಿದೆ".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ವರದಿಯಲ್ಲಿ ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಸದರಿಯವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iii)ರ ಅನ್ವಯ **"ಅವರ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ಮತ್ತು ಸದರಿ ನಿಯಮಗಳ ನಿಯಮ 8(iii-a) ಅನುಸಾರ **"ಅವರನ್ನು ಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಬಡ್ತಿ ಮುಂದೂಡುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯ್ತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ನಾನು ಸೋಮನಹಳ್ಳಿ ಗ್ರಾ.ಪಂ. ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀ ಕೆ. ಕೃಷ್ಣಪ್ಪ ಎಸ್.ಡಿ.ಎಂ.ಸಿ ಸದಸ್ಯರು ಸರ್ಕಾರಿ ಶಾಲೆಯ ಆವರಣದಲ್ಲಿ ನಾಗನಾಯಕನಹಳ್ಳಿ ಹಾಲು ಉತ್ಪಾದಕರ ಸಂಘದ ಸದಸ್ಯರು ಆಸ್ತಿ ಸಂಖ್ಯೆ 60 ರಲ್ಲಿ ಕಟ್ಟಡ ನಿರ್ಮಾಣವನ್ನು ಪರವಾನಿಗೆ ಪಡೆಯದೆ ಪ್ರಾರಂಭಿಸಿರುತ್ತಾರೆಂದು ಈ ಬಗ್ಗೆ ಕಟ್ಟಡದ ನಿರ್ಮಾಣವನ್ನು ಪರವಾನಿಗೆ ಪಡೆಯದೆ ಪಾರಂಭಿಸಿರುತ್ತಾರೆಂದು ಈ ಬಗ್ಗೆ ಕಟ್ಟಡದ ನಿರ್ಮಾಣ ಕೆಲಸವನ್ನು ತಡೆಯುಬೇಕೆಂದು ಮನವಿ ಸಲ್ಲಿಸಿರುವ ದೂರಿನಲ್ಲಿ ನಾನು ಕ್ರಮ ಕೈಗೊಳ್ಳದೆ ಇರುತ್ತೇನೆಂದು ಆರೋಪಿಸಿ ದೂರು ಅರ್ಜಿಯನ್ನು ಕರ್ನಾಟಕ ಲೋಕಾಯುಕ್ತ ಇಲಾಖೆಗೆ ಸಲ್ಲಿಸಿರುತ್ತಾರೆ. ಈ ಬಗ್ಗೆ ನಾನು ಗ್ರಾಮ ಪಂಚಾಯತಿ ಆಡಳಿತ ಮಂಡಳಿಗೆ ಮಾಹಿತಿಯನ್ನು ಹಾಗೂ ದೂರು ಅರ್ಜಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದ್ದು, ಪುನಃ ವಾದಿ ಮತ್ತು ಪ್ರತಿವಾದಿಗಳಿಗೆ ಮೂಲ ದಾಖಲೆಗಳೊಂದಿಗೆ ಗ್ರಾಮ ಪಂಚಾಯತಿಗೆ ಹಾಜರಾಗಿ ವಿವರಣೆಯನ್ನು ಸಲ್ಲಿಸಲು ನೋಟಿಸ್ ನೀಡಿದ್ದು, ಇದರಂತೆ ಕಟ್ಟಡ ನಿರ್ಮಾಣವನ್ನು ಪ್ರಾರಂಭದಲ್ಲಿ ತಡೆದಿರುತ್ತೇನೆ ಹಾಗೂ ಈ ಬಗ್ಗೆ ಸಂಬಂಧಪಟ್ಟ ಆರಕ್ಷಕ ಠಾಣೆಯಲ್ಲಿ ದೂರು ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಈ ಬಗ್ಗೆ ನಾನು ವಿಚಾರಣಾಧಿಕಾರಿಯವರಿಗೆ ಲಿಖಿತ ವಾದದಲ್ಲಿ ಸಲ್ಲಿಸಿದ್ದರೂ ಸಹ ನನ್ನ ವಿರುದ್ಧ ಆರೋಪ ಸಾಬೀತಾಗಿರುತ್ತದೆಂಬ ವರದಿ ಸಲ್ಲಿಸಿರುವುದು ನಿಯಮ ಬಾಹಿರವಾಗಿರುತ್ತದೆ. ವಿವಾದಿತ ಸ್ವತ್ತುಗಳು ಕಂದಾಯ ಇಲಾಖೆಯ ಸರ್ವೆ ನಂಬರ್‌ಗಳಲ್ಲಿ ದಾಖಲಾಗಿದ್ದು, ಈ ತಹಲ್‌ವರೆಗೂ ಕಂದಾಯ ಇಲಾಖೆಯಲ್ಲಿ ಆರ್.ಟಿ.ಸಿ. ದಾಖಲೆಯಲ್ಲಿ ಮುಂದುವರೆದಿರುತ್ತದೆ. ನಾಗನಾಯಕನಹಳ್ಳಿ ಗ್ರಾಮ ಪಂಚಯತಿಯಲ್ಲಿ ಹಿಂದಿನ ಮಂಡಲ್ ಅವಧಿಯಿಂದ ಸರ್ಕಾರಿ ಶಾಲೆ ಮತ್ತು ಮಿಲ್ಕ್ ಫೇಡರೇಷನ್ ಹಾಗೂ ಸ್ವತ್ತುಗಳು ಹೌಸ್ ಲಿಸ್ಟ್ ದಾಖಲೆಯಲ್ಲಿ ನಮೂದು ಮಾಡಿರುತ್ತದೆ. ಆದರೆ ಬೇಡಿಕೆ ವಹಿಯಲ್ಲಿ ತೆರಿಗೆ ವಸೂಲಾತಿಗೆ ದಾಖಲಿಸಿರುವುದಿಲ್ಲ. ಆದ ಕಾರಣ ವಿವಾದಿತ ಸ್ವತ್ತುಗಳಲ್ಲಿ ನಾನು ನಿಯಮಾನುಸಾರ ಯಾವುದೇ ಪರವಾನಿಗೆ ನೀಡಲು ನನಗೆ ಪ್ರದತ್ತವಾದ ಅಧಿಕಾರವಿರುವುದಿಲ್ಲ. ಈ ಬಗ್ಗೆ ನಾನು ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಯಗಿರುವುದಿಲ್ಲ. ಆದರೂ ಸಹ ಸಾರ್ವಜನಿಕ ಹಿತ ದೃಷ್ಟಿಯಿಂದ ನನ್ನ ಹಂತದಲ್ಲಿ ಕ್ರಮ ಕೈಗೊಂಡು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿರುವ ಲಿಖಿತ ವಾದಗಳನ್ನು ಉಪಲೋಕಾಯುಕ್ತರು, ತನಿಖಾಧಿಕಾರಿಗಳು ಸೂಕ್ತ ಪರಿಶೀಲನೆ ನಡೆಸದೆ ಏಕ ಪಕ್ಷಿಯವಾಗಿ ಕ್ರಮ ತೆಗೆದುಕೊಂಡಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ನನ್ನ ವಿವರಣೆಯನ್ನು ಪರಿಶೀಲಿಸಿ ನನ್ನನ್ನು ಆರೋಪ ಮುಕ್ತನನ್ನಾಗಿ ಪರಿಗಣಿಸಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ".

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

"ಶ್ರೀಮತಿ ಅನಿಸಾ ಫಾತಿಮಾ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಸೋಮನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯೆಂದು ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಾಗನಾಯಕನಹಳ್ಳಿ ಮಿಲ್ಕ ಫೆಡರೇಷನ್ ನಾಗನಾಯಕನಹಳ್ಳಿಯ ಆಸ್ತಿ ನಂ.60 ರಲ್ಲಿ ಕಟ್ಟಡ ನಿರ್ಮಾಣದ ಪರವಾನಿಗೆ ಪಡೆಯದೇ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿರುವ ಸಂಗತಿ ಗಮನಕ್ಕೆ ಬಂದ ನಂತರವೂ ಸಹ ಅನಧಿಕೃತ ಕಟ್ಟಡ ನಿರ್ಮಾಣದ ಕೆಲಸ ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವ ಮೂಲಕ ಹಾಗೂ ನಿರ್ಮಿತವಾದ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕ್ರಮ ಕೈಗೊಳ್ಳದೇ ಇರುವ ಮೂಲಕ ಇವರು ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966ರ, ನಿಯಮ 3(1)(i) ಮತ್ತು (iii)"ಕ್ಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ರವರಿಗೆ **"ಅವರ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ಮತ್ತು ಸದರಿ ನಿಯಮಗಳ ನಿಯಮ 8(iii-a) ಅನುಸಾರ **"ಅವರನ್ನು ಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಬಡ್ತಿ ಮುಂದೂಡುವ"**ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/903/ಗ್ರಾಪಂಕಾ/2017,</u>**

**<u>ಬೆಂಗಳೂರು, ದಿನಾಂಕ:05-05-2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 1957ರ ನಿಯಮ 8(iii)ರನ್ವಯ **"ಅವರ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ಮತ್ತು ಸದರಿ ನಿಯಮಗಳ ನಿಯಮ 8(iii-a) ಅನುಸಾರ **"ಅವರನ್ನು ಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಬಡ್ತಿ ಮುಂದೂಡುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

8/5/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ಅಪರ ನಿಬಂಧಕರು, ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
7. ಶ್ರೀಮತಿ ಅನಿಸಾ ಫಾತಿಮಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.